ಎಷ್ಟು ಬೇಕಾದರೂ ಕೇಳಿ ತಿನ್ನಿ. ಮತ್ತು ಊಟಕ್ಕೂ ಫಿಶ್ ಕರಿ, ರೈಸ್' ಎಂದು ಹೇಳಿ ಕೆಳಗಿಳಿದು ಹೋಗಿದ್ದ. 'ನೀನೇಳ್ತಿರೋದು ನೂರಕ್ಕೆ ನೂರು ಪರ್ಸೆಂಟ್ ಸತ್ಯ. ಅಗತ್ಯವಿಲ್ಲದ ಸರಕು, ಅಗತ್ಯವಿಲ್ಲದ ಸಂಗತಿಗಳಿಗೆಲ್ಲ ಮನುಷ್ಯ ಹೊಡೆದಾಡಿಕೊಂಡು ಸಾಯುತ್ತಿದ್ದಾನೆ. ಜಾತಿ, ಧರ್ಮ, ಮತ ಯಾವುದೇ ಆಗಲಿ ಮನುಷ್ಯನಿಗಾಗಲೀ, ಪ್ರಾಣಿ ಪಕ್ಷಿಗಳಿಗಾಗಲೀ ತಿನ್ನಲಿಕ್ಕೆ ಆಹಾರ ಕೊಡ್ತಾವ? ಬೆಚ್ಚಗೆ ಇರಲಿಕ್ಕೆ ಜಾಗ ಕೊಡ್ತಾವ? ಅರವತ್ತು, ಎಪ್ಪತ್ತು ದಶಗಳಿಗೆ ಹೋಲಿಸಿದರೆ ಇವೊತ್ತು ಎಲ್ಲಾ ಕ್ಷೇತ್ರಗಳೂ ಮತ್ತಷ್ಟು ಹೊಲಸು ತುಂಬಿಕೊಂಡು ಹದಗೆಟ್ಟು ಹೋಗಿವೆ. ಈ ಅಕ್ಷರಸ್ಥರಿದ್ದಾರಲ್ಲ ಇವರೇ ಕನ್ನಿಂಗ್ ಡಾಗ್ಸ್ ಅಂಡ್ ಬ್ಯಾಂಡಿಕೂಟ್ಸ್. ಜಗತ್ತಿನ ಎಲ್ಲಾಜಾತಿ, ಮತ, ಪಂಥ, ಧರ್ಮಗಳಲ್ಲೂ ಅನಾದಿ ಕಾಲದಿಂದಲೂ ಅಕ್ಷರಸ್ಥರು ಮತ್ತು ಶ್ರೀಮಂತರು ಅನಕ್ಷರಸ್ಥರನ್ನು ಮತ್ತು ಬಡವರನ್ನು ನಿರಂತರವಾಗಿ ವಂಚಿಸುತ್ತಲೇ ಬಂದಿದ್ದಾರೆ. ಆದರೆ, ಇವರು ಅನಕ್ಷರಸ್ಥರ ಮತ್ತು ಬಡವರ ಸಂತಸ, ಸಂಭ್ರಮಗಳನ್ನು ಸಂಪೂರ್ಣವಾಗಿ ಕಸಿದುಕೊಳ್ಳಲು ಸಾಧ್ಯವಾಗಿಲ್ಲ. ಅದಿರಲಿ ಇಂದು ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಹಿತ್ಯ, ಸಾಂಸ್ಕೃತಿಕ ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಸೋಷಿಯಲ್ ಫ್ಯಾಬ್ರಿಕೇಶನ್ ಮಿತಿಮೀರಿ ವಿಜೃಂಭಿಸುತ್ತಿದೆ. ಒಂದು ಇಟ್ಟಿಗೆಗೆ ಬಂಗಾರ ಬಣ್ಣದ ಪೇಂಟ್ ಮಾಡಿ ಶೋ ರೂಮಿನಲ್ಲಿ ಇಟ್ಟರೆ ಜನ ಅದನ್ನು ಬಂಗಾರದ ಗಟ್ಟಿ ಎಂದು ನಂಬುತ್ತಾರೆ. ಜಾಹೀರಾತುಗಳು ಇದಕ್ಕೆ ಬಲ ಕೊಟ್ಟವೆ. ಸುಳ್ಳನ್ನು ನಿಜವೆಂದು ಪದೇ ಪದೇ ಹೇಳಿ ಜನಸಾಮಾನ್ಯರಿಗೆ ಅದನ್ನು ನಿಜವೆಂದೇ ನಂಬಿಸುವುದು. ರಿಪೇರಿ ಮಾಡ್ಲಿಕ್ಕೆ ಸಾಧ್ಯವಾಗದಷ್ಟು ವ್ಯವಸ್ಥೆ ಊನಗೊಂಡಿದೆ. ನಿನ್ನನ್ನು ಇಲ್ಲಿಗೆ ಕರೆಸಿಕೊಂಡಿದ್ದು ಒಂದು ಇಂಪಾರ್ಟೆಂಟ್ ವಿಷಯ ಪರ್ಸನಲ್ಲಾಗೇ ಮಾತನಾಡಲಿಕ್ಕೆ' ಮಾತು ನಿಲ್ಲಿಸಿ ಹೆಗಡೆ ಜನಾರ್ದನ ಬಾಳಿಗನನ್ನು ಕೂಗಿದ್ದ. ಬಾಳಿಗ ಮತ್ತೆರಡು ಪ್ಲೇಟ್ ಫಿಶ್ ಫ್ರೈ ಹಿಡಿದು ಬಂದು ಟೇಬಲ್ ಮೇಲಿಟ್ಟು, ಖಾಲಿಯಾಗಿದ್ದ ಗ್ಲಾಸುಗಳಿಗೆ ವಿಸ್ಕಿ, ಸೋಡಾ, ನೀರನ್ನು ಬೆರೆಸಿ 'ಊಟಕ್ಕೆ ಕೆಳಗೆ ಬರ್ತೀರೋ ಇಲ್ಲ ಇಲ್ಲೇ ತಂದು ಬಡಿಸಲೊ?' ಎಂದು ಕೇಳಿದ್ದ. ಹೆಗಡೆ 'ಇನ್ನರ್ಧ ಗಂಟೆ ಹೇಳ್ತೇನೆ. ಅಷ್ಟರವರೆಗೆ ನೀನೂ ಒಂದಿಷ್ಟು ಹಾಕಿಕೊ, ನಿನ್ನ ಪಾಲನ್ನು ತೆಗೆದುಕೊಂಡು ಕಿಚನ್ ಗೆ ಹೋಗು' ಎಂದು ಗ್ಲೆನ್ಫಿಡಿಚ್ ಬಾಟಲಿಯನ್ನು ತೆಗೆದುಕೊಳ್ಳಲು ಹೇಳಿದ್ದ. ಅಲ್ಲೇ ಇದ್ದ ಗ್ಲಾಸೊಂದಕ್ಕೆ ಎರಡು ಪೆಗ್ ಆಗುವಷ್ಟು ವಿಸ್ಕಿಯನ್ನು ಬಗ್ಗಿಸಿಕೊಂಡು ಬಾಳಿಗ ಕೆಳಗಿಳಿದು ಹೋದ. 'ಏನು ಅಂಥ ಪರ್ಸನಲ್?' ಬಾಳಿಗ ಮರೆಯಾದ ಕೂಡಲೇ ಕೇಳಿದ್ದೆ ನಾನು. 'ಈ ವಿಷಯವನ್ನು ನಮ್ಮ ನಾರಾಯಣ ಹೆಗಡೆ ಹತ್ತಿರ ಕೂಡಾ ಚರ್ಚಿಸಿ ತೀರ್ಮಾನಕ್ಕೆ ಬಂದಿದ್ದಾಗಿದೆ. ನೀನಂದು ಪೊಲೀಸ್ ಸ್ಟೇಷನ್ ನಲ್ಲಿ ನನಗೆ ಮಾಡಿದ ಸಹಾಯದಿಂದಾಗಿ ಅತ್ಯಂತ ದೊಡ್ಡ ಋಣ ನನ್ನ ಮೇಲೆ ಹೊರಿಸಿದ್ದೀಯ. ಅಪ್ಪ ಹಿಂದೆ ಅಡಿಕೆ ವ್ಯಾಪಾರ ಮಾಡುವಾಗ, ವ್ಯಾಪಾರದ ನಿಮಿತ್ತ ಬೆಂಗಳೂರಿಗೆ ಹೋಗುತ್ತಿದ್ದರಂತೆ. ಅಂಥ ದಿನಗಳಲ್ಲಿ ನೆಲಮಂಗಲದ ಬಳಿ ಅವರ ಕಳ್ಳ ಗೋಡೌನ್ ಇದ್ದ ಜಾಗದ ಪಕ್ಕದಲ್ಲಿ ತುಂಬಾ ಕಡಿಮೆ ಬೆಲೆಗೆ ನಲವತ್ತು ಅರವತ್ತು ಡೈಮನ್ಶನ್ನಿನ ಮೂರು ಸೈಟುಗಳನ್ನು ಕೊಂಡಿದ್ದನಂತೆ. ಹದಿನೈದು ವರ್ಷಗಳ ಹಿಂದೆಯೇ ಅಪ್ಪನ ಹೆಸರಿನಿಂದ ನನ್ನ ಹೆಸರಿಗೆ ಅವುಗಳ ಖಾತೆ ಬದಲಾಗಿತ್ತು. ಈಗ ಅದು ಪಕ್ಕಾ ನಗರವೇ ಆಗಿಬಿಟ್ಟಿದೆ. ಅದರಲ್ಲೊಂದು ಸೈಟನ್ನು ನಿನ್ನ ಹೆಸರಿಗೆ ಬರೆದು ಋಣ ಮುಕ್ತನಾಗಬೇಕೆಂದಿದ್ದೇನೆ. ಮತ್ತೆ ನೀನು ಅನ್ಯಥಾ ಭಾವಿಸಬಾರದು' ಮಾತು ನಿಲ್ಲಿಸಿ ಗ್ಲಾಸಿನಲ್ಲಿ ಕಾಲು ಭಾಗದಷ್ಟಿಟ್ಟಿದ್ದ ವಿಸ್ಕಿಯನ್ನು ಒಂದೇ ಸಾರಿ ಕುಡಿದಿದ್ದ. ಕ್ಷಣ ಏನು ಮಾತನಾಡಬೇಕೆಂದು ತೋರಲಿಲ್ಲ ನನಗೆ. ಮನಸ್ಸು ಮತ್ತೆ ಅನೇಕ ವರ್ಷಗಳ ಹಿಂದಕ್ಕೆ ಓಡಿತ್ತು. 'ನಿನ್ನ ಆಶಯಕ್ಕೆ ನಿಜಕ್ಕೂ ನನಗೆ ಹೃದಯ ತುಂಬಿ ಬರ್ತಿದೆ ಹೆಗಡೆ. ಆದರೆ, ನಿನ್ನ ಈ ಉಡುಗೊರೆಗೆ ಖಂಡಿತಾ ನಾನು ಅರ್ಹನಲ್ಲ. ಮತ್ತೆ ನಿನ್ನ ಋಣಕ್ಕೆ ಯೋಗ್ಯವಾಗಿ ಬಾಧ್ಯನಾಗಬೇಕಾದವನು ಪ್ರಮೋದ್ ಶಾಸ್ತ್ರಿ' ಕೂಡಲೇ ಹೇಳಿದ್ದೆ ನಾನು. 'ಅರೆ, ಮರೆತಿದ್ದೆ ನೋಡು. ಹೇಗಿದ್ದಾನೆ ಅವ ಈಗ, ಏನು ಮಾಡ್ತಿದ್ದಾನೆ? ಅವೊತ್ತು ಪೊಲೀಸ್ ಸ್ಟೇಷನ್ ಸೆಲ್ ನಲ್ಲಿ ಏರೋಪ್ಲೇನ್ ಹಾಕಿದಾಗ ಅವನ ಕಣ್ಣಲ್ಲಿ ಆಕ್ರೋಶ, ಹತಾಶೆ ಎರಡೂ ಮೇಳೈಸಿದ್ದವು. ಅವನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಸತ್ಯಮೇವ ಜಯತೆ ಎಂದು ಕಣ್ಮುಚ್ಚಿ ಗೊಣಗಿಕೊಳ್ಳುತ್ತಿದ್ದ' ಆತಂಕ, ಕುತೂಹಲ ಎರಡೂ ಢಾಳಾಗಿ ಬೆಸೆದುಕೊಂಡಿದ್ದವು ಜಿ.ವಿ. ಹೆಗಡೆಯ ಮಾತಲ್ಲಿ. 'ಅಂ ನಿನ್ನನ್ನು ನಿನ್ನ ಅಪ್ಪ ಬಿಡಿಸಿಕೊಂಡು ಹೋದ ಹದಿನೈದು ದಿನಗಳ ನಂತರ ಮತ್ತೊಂದು ಬೆಳವಣಿಗೆಯಲ್ಲಿ